ಹಾಗೆಯೇ ಅನಿಸುತ್ತದೆ. ಕಾಣದ ಇರಿಕುಗಳಲ್ಲಿ ಹುಟ್ಟಿ ಬೆಟ್ಟಗಳಲ್ಲಿ ಇಳಿದು, ಪರ್ವತಗಳನ್ನು ಅಕ್ಕರೆಯಿಂದ ಆವರಿಸಿಕೊಂಡು, ಪ್ರವಾಹವಾಗಿ ಧುಮುಕುತ್ತಾ ಹರಿಯುವ ನದಿಗಳು. ಓಡುವ ಹರಿಣದಂತೆ, ಮಂದಗಮನೆಯಂತೆ, ಮುಂದಕ್ಕೆ ಓಡಿ ಪಕ್ಕನೇ ಏನೋ ನೆನಪಾದವರಂತೆ ವಾಪಸ್ಸಾಗಿ, ಅಲ್ಲಲ್ಲಿ ಇಡೀ ಊರಿಗೇ ತಿರುವು ಹಾಕಿಕೊಂಡು, ಕೆಲವೆಡೆಗೆ ಗಡಿಯ ಗುರುತಾಗಿ, ಮತ್ತೆ ಕೆಲವೆಡೆ ಮಂಥರೆಯಂತೆ ಜಗಳ ಸೃಷ್ಟಿಸಿ, ಮಗದೊಂದೆಡೆ ಧರ್ಮ, ಊರುಗಳನ್ನೇ ಬೆಸೆಯುತ್ತಾ ಅಹಹಾ... ನದಿ ಹರಿಯುವ ಸೊಗಸಿಗೆ ಸಾಟಿಯುಂಟೇ... ಹರಿವ ದಿಕ್ಕಿಗೆ ಅಡ್ಡಿಯುಂಟೇ...

ಉಂಟು.

ನದಿ ಹರಿವ ದಿಕ್ಕಿಗೆ ಮಾತ್ರವಲ್ಲ... ಮಳೆಗೇ ಈಗ ಸಾವಿರ ಅಡ್ಡಿಗಳು. ಮಳೆ ಸೃಷ್ಟಿಯಾಗುವುದಾದರೂ ಹೇಗೆ ಗೊತ್ತೆ. ಮಲ್ಹಾರ ರಾಗಕ್ಕೆ ರಿಯಾಜ್ ಮಾಡಿದಷ್ಟೂ ಕಡಿಮೆ ಎಂಬ ಗಾಯಕಿಯಂತೆ ಮಳೆಮಾಯಿ ಪ್ರತಿಯೊಂದು ಹನಿಯನ್ನೂ ಕುಶಲ ಮಾತಾಡಿಸಿ, ಒಪ್ಪಮಾಡುತ್ತಾಳೆ. ಭೂಮಿಯ ಇಂಚಿಂಚುಗಳಿಂದ ಆಯ್ದ ಮುತ್ತು ಪೋಣಿಸಿದಂತೆ, ಒಂದೊಂದೇ ಹನಿಗಳನ್ನು ಹೆಕ್ಕಿ ಎಂಟು ತಿಂಗಳ ಕಾಲ ಜತನ ಮಾಡಿ ಮಳೆಮಾಯಿ ಮೋಡ ಸೃಷ್ಟಿ ಮಾಡುತ್ತಾಳೆ.

ಆ ಹನಿಗಳು ಮಳೆಯಾಗಿ ಬೀಳದಂತೆ ವಿಷದ ಬಾಣಗಳನ್ನು ಎಸೆಯಲಾರಂಭಿಸಿದರು ಈ ಜನರು. ಮಳೆಮಾಯಿಯ ವಾತ್ಸಲ್ಯ ತೆಕ್ಕೆಯಿಂದ ಜಾರಿದ ಈ ಹನಿಗಳೆಲ್ಲ ಭೂಮಿಗೆ ಇಳಿಯಲಾರದೇ ಕಂಗಾಲಾದವು. ಬೆಳ್ಳನೆಯ ಎಳಸು ಮೋಡಗಳು ಪಕ್ವವಾಗಿ ಕಪ್ಪಾಗುವ ಕಾಲಕ್ಕಾಗಿ ಕಾದು ಕಾದು ಸೋತವು. ಅಲ್ಲೊಂದು ಇಲ್ಲೊಂದು ಬೆಳ್ಳನೆಯ ಮೋಡಗಳು ಪಕ್ವವಾಗಿ ಭೂಮಿ ತಲುಪಿದರೆ ಅಲ್ಲಿ ಸಂಭ್ರಮದ ಸ್ವಾಗತವೇ ಇಲ್ಲ ! ಕಡಲ ಮಕ್ಕಳಿಂದ ಪೂಜೆಯಿಲ್ಲ. ನಾಟಿಯ ಹಾಡಿಲ್ಲ. ಧೋಗುಟ್ಟುವ ಮಳೆಗೆ ಲಾಲಿಯಂತೆ ಹಾಡುವ ಹೆಂಗಸರ ದನಿಯಿಲ್ಲ. ಉಳುವಾತನು ದೂರದಲ್ಲಿ ಹೊರಡಿಸುವ ಗುಂಗುಹಿಡಿಸುವ ನಾದವಿಲ್ಲ. ಇದನ್ನು ಕಂಡ ಮಳೆಮಾಯಿಗೆ ಹೇಗಾಗಬೇಡ ? ಅವಳ ಕಣ್ಣಂಚಲ್ಲಿ ಜಿನುಗು... ಒಂದು ಕಾಲದಲ್ಲಿ ಸಾಮ್ರಾಜ್ಞಿಯಾಗಿ ಮೆರೆದ ಮಳೆ ಮಹಾರಾಣಿ, ಇಂದು ಭೂಮಿಯಲ್ಲಿ ಯಾರಿಗೂ ಬೇಡ. ಯಾಕೆ ಹೀಗೆ ಬದಲಾವಣೆ ಎಂಬುದು ಗೊತ್ತಾಗದೇ ಕೊರಗುತ್ತಾಳೆ...

ಮಳೆಮಾಯಿ ಭೂಮಿ ಮೇಲೆ ಕೃಪೆ ತೋರಬೇಕಾದರೆ ಎಷ್ಟೊಂದು ಸುಂದರ ಹಂತಗಳಿವೆ ಗೊತ್ತೆ. ಆ ಸುಂದರ ವ್ಯವಸ್ಥೆಯಲ್ಲಿ, ಪ್ರೀತಿ ಮತ್ತು ರಾಗವೇ ಪ್ರಧಾನ.

ಪುಷ್ಪರಾಜನ ಆದೇಶದಂತೆ ಬೇಸಿಗೆಯಲ್ಲಿ ಅರಳುವ ಕೋಟ್ಯಂತರ ಹೂವುಗಳನ್ನು ಕಂಡು ಚಿಟ್ಟೆಗಳು ತಮ್ಮ ರಂಗು ರಂಗಿನ ರೆಕ್ಕೆಗಳ ಮೇಲೆ ಪ್ರೇಮದೋಲೆಗಳನ್ನು ಬರೆದುಕೊಂಡು ಭೂಮಿಯ ಉದ್ದಗಲಕ್ಕೂ ಸುತ್ತಾಡುತ್ತವೆ. ಮಳೆಗಾಗಿ ಭೂಮಿ ಸಿದ್ಧವಾಗಿರುವುದನ್ನು ಗಮನಿಸಿ, ಈ ವಿಷಯವನ್ನು ರೆಕ್ಕೆ ಮೇಲೆ ಬರೆದು–ಹೊತ್ತು ಚಿಟ್ಟೆ ಸಂಕುಲಗಳು ಮಳೆಮಾಯಿಯ ಬಳಿಗೆ ಪ್ರಯಾಣ ಬೆಳೆಸುತ್ತವೆ.

ಏಳುಬಣ್ಣಗಳ ಚಿಟ್ಟೆಗಳು ಸಾಲು ಸಾಲಾಗಿ ಮಳೆಮಾಯಿಯ ಬಳಿಗೆ ಪ್ರಯಾಣ ಬೆಳೆಸುವ ಈ ದೃಶ್ಯವನ್ನೊಮ್ಮೆ ಕಂಡವರೆ ಧನ್ಯರು. ಬಣ್ಣದೋಕುಳಿಯೇ ಹರಿದು ಹೋದಂತೆ, ಹರಿವ ನದಿಯೊಳಗೆ ಏಳು ಬಣ್ಣಗಳ ಕಲಸಿ ಬಿಟ್ಟಂತೆ... ಚಿಟ್ಟೆ ಸಂಕುಲವೇ 'ಸಾರ್ಥ'ದಂತೆ ಹೊರಡುತ್ತವೆ ಮಳೆಮಾಯಿಯ ಬಳಿಗೆ.